ಖಂಡ 2 ರಿಂದ 6 ರವರೆಗೆ

ಉಪಾಧ್ಯಕ್ಷರು : "ಪ್ರಸ್ತಾವ ಏನೆಂದರೆ: ಖಂಡ 2 ರಿಂದ 6 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 6 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

("ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ, 2005 ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

(ಆ) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕ,2005

ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ

ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೆ, ಇದೊಂದು ಬಹಳ ಸರಳವಾಗಿರುವಂತಹ ತಿದ್ದುಪಡಿ ವಿಧೇಯಕ. ಹಿಂದೆ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ 2004 ಅನ್ನು ನಿರಶನಗೊಳಿಸಿದ್ದರಿಂದ ಹೊಸ ವಿಶ್ವವಿದ್ಯಾನಿಲಯಗಳನ್ನು ನಾವು ಸ್ಥಾಪನೆ ಮಾಡುತ್ತಾ ಹೋಗುತ್ತಾ ಇರುತ್ತೇವೆ. ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ಸ್ಥಾಪಿತವಾದ ಅಥವಾ ಸ್ಥಾಪಿತವಾಗಿದೆಯೆಂದು ಭಾವಿಸಲ್ಪಡುವಂತಹ ವಿಶ್ವವಿದ್ಯಾನಿಲಯಗಳು ಈ ಒಂದು ವಿಧೇಯಕದ ಅಡಿಯಲ್ಲಿ ಬರುತ್ತವೆ ಎಂಬ ಒಂದು ಸರಳ ತಿದ್ದುಪಡಿ. ಈಗ ಈ ವಿಶ್ವವಿದ್ಯಾನಿಲಯಗಳು ಇತ್ತೀಚೆಗೆ ಕೃಷಿ ವಿಶ್ವವಿದ್ಯಾನಿಲಯಗಳು ಇವೆಲ್ಲಾ ಸ್ಥಾಪನೆಯಾಗಿವೆ. ಈ ವಿಧೇಯಕದಲ್ಲಿ ಇಲ್ಲದೇ ಇದ್ದುದರಿಂದ ಈ ಒಂದು ಸರಳ ತಿದ್ದುಪಡಿ ತಂದಿದ್ದೇನೆ. ಸದನ ಈ ಸರಳ ವಿಧೇಯಕ ತಿದ್ದುಪಡಿಯನ್ನು ಒಪ್ಪಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಅಧ್ಯಕ್ಷರೆ, ಇದನ್ನು ನಾವು ಸ್ವಾಗತಿಸುತ್ತೇವೆ. ವಿಶ್ವವಿದ್ಯಾನಿಲಯಗಳಿಗೆ ಯಾರಾದರೂ ಎನ್‌ಕ್ರೋಚ್ ಮಾಡಿದರೆ ಎವಿಕ್ಟ್ ಮಾಡಿಸಬೇಡಿ ಎಂದು ಹೇಳಲಿಕ್ಕಾಗುತ್ತದೆಯೇ? ಮಾಡಬಹುದು.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "2005ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ: "ಖಂಡ 2 ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ ' ಮೊದಲನೆಯ ಖಂಡ ಹೆಸರು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಅಧ್ಯಕ್ಷರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಿರುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

(ಇ) ಕರ್ನಾಟಕ ಭೂಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕ 2005

ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) : ಅಧ್ಯಕ್ಷರೆ, "2005ರ ಕರ್ನಾಟಕ ಭೂಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ.ಪಿ. ಪ್ರಕಾಶ್ : ಇದೂ ಸಹ ಬಹಳ ಸರಳ ಸಣ್ಣ ತಿದ್ದುಪಡಿ. 77ನೇ ಪ್ರಕರಣದಡಿ ಹಿಂದೆ ಯಾವುದಾದರೂ ಅಪೀಲಿನಲ್ಲಿ ಜಿಲ್ಲಾಧಿಕಾರಿ ಮಾಡಿದಂತಹ ಆಜ್ಞೆಯ ವಿರುದ್ಧ ವಿಭಾಗಾಧಿಕಾರಿಗಳಿಗೆ ಅಪೀಲ್ ಮಾಡುವ ಅಧಿಕಾರ ಇತ್ತು. ಆದರೆ ಹಾರನಹಳ್ಳಿ ರಾಮಸ್ವಾಮಿ ಆಡಳಿತ ಸುಧಾರಣಾ ಆಯೋಗದ ವರದಿ ಅಂಗೀಕೃತವಾದ ಮೇಲೆ ವಿಭಾಗಾಧಿಕಾರಿಗಳ ಹುದ್ದೆ ಇಲ್ಲದೇ